**ದಿನಾಂಕ:01-02-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಎ.ಎ.ಪಿ. ರವರಿಂದ:-**

**(ಸಾಕ್ಷಿಗೆ ಕನ್ನಡ ಭಾಷೆ ಬಾರದ ಕಾರಣ ಇಂಗ್ಲೀಷ್ ಭಾಷೆ ಬರುತ್ತಿದ್ದು, ಇಂಗ್ಲೀಷ್ ಭಾಷೆಯಲ್ಲಿ ನುಡಿದ ಸಾಕ್ಷ್ಯವನ್ನು ಕನ್ನಡ ಭಾಷೆಗೆ ತರ್ಜುಮೆ ಮಾಡಿ ಸಾಕ್ಷ್ಯವನ್ನು ದಾಖಲಿಸಿಕೊಳ್ಳಲಾಯಿತು.)**

ನಾನು ಹಾಜರುಪಡಿಸಿದ ಅಕೌಂಟ್ ಸ್ಟೇಟ್‌ಮೆಂಟ್ ಪ್ರಕಾರ ದಿನಾಂಕ 19.01.2013 ರಂದು ನನಗೆ ಪ್ರತಿವಾದಿಯಿಂದ 50,000/- ರೂಗಳು ಚೆಕ್ ಮುಖಾಂತರ ಮುಟ್ಟಿರುತ್ತದೆ ಎಂದರೆ ಸರಿ. ನೀವು 50,000/- ರೂಗಳನ್ನು ಪಡೆದ ಬಗ್ಗೆ ನಿಮ್ಮ ವಾದ ಪತ್ರದಲ್ಲಿ ಮತ್ತು ನೀವು ಪ್ರತಿವಾದಿಗೆ ಕಳುಹಿಸಿದ ನೋಟಿಸಿನಲ್ಲಿ ನಮೂದಿಸಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಆ ಸಮಯದಲ್ಲಿ ನಮ್ಮ ಬಳಿ ಯಾವುದೇ ದಾಖಲೆಗಳು ಇರಲಿಲ್ಲ, ಆದ್ದರಿಂದ ನಮೂದಿಸಿಲ್ಲ ಎನ್ನುತ್ತಾರೆ. 50,000/- ರೂಗಳು ನಿಮ್ಮ ಅಕೌಂಟ್‌ನಲ್ಲೇ ಜಮಾ ಆಗಿತ್ತು ಎಂದರೆ ಸರಿ. ನಿಮ್ಮ ಅಕೌಂಟ್ ಸ್ಟೇಟ್‌ಮೆಂಟ್ ಬ್ಯಾಂಕಿನಲ್ಲಿ ಲಭ್ಯವಿತ್ತು ಎಂದರೆ ಸಾಕ್ಷಿ ಆ ಸಮಯದಲ್ಲಿ Software ಸಮಸ್ಯೆಯಿಂದ ಯಾವುದೇ ದಾಖಲೆಗಳು ಲಭ್ಯವಿರಲಿಲ್ಲ, ಈ ದಾವೆಯನ್ನು ಹೂಡಿದ ನಂತರ ನಾವು ಬ್ಯಾಂಕಿನವರಿಗೆ ಕೋರಿಕೊಂಡು ಸದರಿ ಅಕೌಂಟ್ ಸ್ಟೇಟ್‌ಮೆಂಟ್ ನ್ನು ಪಡೆದಿರುತ್ತೇವೆ ಎನ್ನುತ್ತಾರೆ. Software ಸಮಸ್ಯೆ ಇದ್ದ ಬಗ್ಗೆ ಬ್ಯಾಂಕಿನವರು ಯಾವುದೇ ಹಿಂಬರಹ ನೀಡಿಲ್ಲ ಎಂದರೆ ಸರಿ. ಪ್ರತಿವಾದಿ 50,000/- ರೂಗಳನ್ನು ಗೋಡಾನ್ ಸಲುವಾಗಿ ಪಾವತಿಸಿದ್ದರು ಎಂದರೆ ಸಾಕ್ಷಿ ಪ್ರತಿವಾದಿ ಹಣ ಪಾವತಿಸಿದ್ದರು , ಆದರೆ ಯಾವುದರ ಸಲುವಾಗಿ ಎಂದು ದಾಖಲೆಗಳನ್ನು ನೋಡಿ ಹೇಳುತ್ತೇನೆ ಎನ್ನುತ್ತಾರೆ. ಯಾವ

ದಾಖಲೆಗಳನ್ನು ಪರಿಶೀಲಿಸಬೇಕಾಗುತ್ತದೆ ಎಂದರೆ ಸಾಕ್ಷಿ ಪ್ರತಿವಾದಿ ಬಾಡಿಗೆ ಹಣವನ್ನು ಚೆಕ್ ಮುಖಾಂತರ ಸಲ್ಲಿಸುತ್ತಿದ್ದರಿಂದ ಯಾವ ಸಲುವಾಗಿ ಸದರಿ 50,000/- ರೂಗಳನ್ನು ಪ್ರತಿವಾದಿ ಚೆಕ್ ಮುಖಾಂತರ ಕೊಟ್ಟಿದ್ದರು ಎಂದು ಪರಿಶೀಲಿಸಬೇಕಾಗುತ್ತದೆ ಎನ್ನುತ್ತಾರೆ. ವಾದ ಪತ್ರದಲ್ಲಿ ಗೋಡಾನ್ ಬಾಡಿಗೆ ಹಣ ದಿನಾಂಕ 01.12.2017 ರಿಂದ 31.03.2018 ರವರೆಗೆ ಕೊಡಬೇಕಾಗುತ್ತದೆ ಎಂದು ನಮೂದಿಸಲಾಗಿದೆ ಎಂದರೆ ಸರಿ. ವಾದ ಪತ್ರದಲ್ಲಿ ಶಾಪ್ ಗೆ ಸಂಬಂಧಿಸಿದ ಬಾಕಿ ಹಣ ದಿನಾಂಕ 01.12.2014 ರಿಂದ 31.11.2016 ರವರೆಗೆ ಎಂದು ನಮೂದಿಸಲಾಗಿದೆ ಎಂದರೆ ಸರಿ. ಅಕೌಂಟ್ ಸ್ಟೇಟ್ ಮೆಂಟ್ ಪ್ರಕಾರ ದಿನಾಂಕ 31.12.2012 ರಂದು ಪ್ರತಿವಾದಿ 1,00,000/- ರೂಗಳನ್ನು ಶಾಪ್ ಗೆ ಸಂಬಂಧಿಸಿದಂತೆ ಡೆಪಾಸಿಟ್ ಮಾಡಿದ್ದಾರೆ ಎಂದರೆ ಸರಿ. ನಿಮ್ಮ ನೋಟಿಸಿನ ಪ್ರಕಾರ ಶಾಪ್‌ಗೆ ಸಂಬಂಧಿಸಿದಂತೆ ದಿನಾಂಕ 01.12.2014 ರಿಂದ 13.11.2016 ರವರೆಗೆ ಕೇವಲ ಹೆಚ್ಚುವರಿ ಬಾಡಿಗೆ ಹಣ ಬರಬೇಕಾಗಿತ್ತು ಮತ್ತು ಬಾಡಿಗೆ ಹಣ ಯಾವುದೇ ಬಾಕಿ ಇರಲಿಲ್ಲ ಎಂದರೆ ಸರಿ.

**2.** ನೀವು ಹಾಜರುಪಡಿಸಿದ ಅಕೌಂಟ್ ಸ್ಟೇಟ್‌ಮೆಂಟ್ ಪ್ರಕಾರ ದಿನಾಂಕ 19.01.2013 ರಂದು ಯಾವುದೇ ಬಾಡಿಗೆ ಹಣ ಬಾಕಿ ಇರಲಿಲ್ಲ ಎಂದರೆ ಸರಿ. ಹಾಗಿದ್ದರೆ ದಿನಾಂಕ 19.01.2013 ರಂದು ಡೆಪಾಸಿಟ್ ಮಾಡಿದ 50,000/- ರೂಗಳು ಗೋಡಾನ್ ಗೆ ಸಂಬಂಧಿಸಿದಂತೆ ಭದ್ರತೆ ಹಣವಾಗಿತ್ತು ಎಂದರೆ ಸರಿ. ಗೋಡಾನ್ ಗೆ ಒಟ್ಟು 4,00,000/- ರೂಗಳನ್ನು ಭದ್ರತೆಯಾಗಿ ಇಡಬೇಕಿತ್ತು, ಬಾಡಿಗೆ ಹಣ ಇರಲಿಲ್ಲ ಎಂದರೆ ಸರಿಯಲ್ಲ. 50,000/- ರೂಗಳನ್ನು ಗೋಡಾನ್ ಸಲುವಾಗಿ ಭದ್ರತೆಗಾಗಿ ಪಡೆದ ನಂತರ

ಉಳಿದ 3,50,000/- ರೂಗಳನ್ನು ಹಣದ ರೂಪದಲ್ಲಿ ಭದ್ರತೆಗಾಗಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಪ್ರತಿವಾದಿಯ ಮಧ್ಯೆ ಪ್ರತಿವಾದಿ ನನಗೆ 4,00,000/- ರೂಗಳನ್ನು ಕೊಡಬೇಕು ಮತ್ತು ಪ್ರತಿವಾದಿ ಗೋಡಾನನ್ನು ಬಾಡಿಗೆ ಇಲ್ಲದೆ ಉಪಯೋಗಿಸಬೇಕು ಎಂದು ಮೌಖಿಕವಾಗಿ ಮಾತುಕತೆ ಆಗಿತ್ತು ಎಂದರೆ ಸರಿಯಲ್ಲ. ಆ 4,00,000/- ರೂಗಳನ್ನು ನಾನು ಪ್ರತಿವಾದಿಗೆ ಪ್ರತಿವಾದಿಯು ಗೋಡಾನನ್ನು ಬಿಟ್ಟುಕೊಡುವ ಸಮಯದಲ್ಲಿ ಮರಳಿಸಬೇಕೆಂದು ಮಾತುಕತೆ ಆಗಿತ್ತು ಎಂದರೆ ಸರಿಯಲ್ಲ. ಪ್ರತಿವಾದಿ ನನಗೆ ಪ್ರತಿಬಾರಿ 4,00,000/- ರೂಗಳನ್ನು ಮರಳಿಸು, ನಾನು ಗೋಡಾನನ್ನು ಬಿಟ್ಟುಕೊಡುತ್ತೇನೆಂದು ಕೇಳುತ್ತಿದ್ದರು ಎಂದರೆ ಸರಿಯಲ್ಲ. ಈ ಸಂಗತಿಯನ್ನು ಪ್ರತಿವಾದಿ ನಿಮಗೆ ನೀಡಿದ ಮರು ಉತ್ತರದಲ್ಲಿ ಬರೆದಿದ್ದರು ಎಂದರೆ ಸಾಕ್ಷಿ ಪ್ರತಿವಾದಿ ಮರು ಉತ್ತರ ನೋಟಿಸಿನಲ್ಲಿ ಬರೆದಿದ್ದರು, ಆದರೆ ನಾನು ಪ್ರತಿವಾದಿಯಿಂದ ಯಾವುದೇ ಹಣ ಪಡೆದಿಲ್ಲ ಎನ್ನುತ್ತಾರೆ. ಪ್ರತಿವಾದಿ ಆ ರೀತಿ ಮರು ಉತ್ತರ ನೋಟಿಸಿನಲ್ಲಿ ಬರೆದಿದ್ದಕ್ಕೆ ಉತ್ತರವಾಗಿ ಪ್ರತಿವಾದಿಗೆ ಯಾವುದೇ ನೋಟಿಸ್ ನೀಡಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾವು ಪ್ರತಿವಾದಿಯಿಂದ ಯಾವುದೇ ಹಣ ಪಡೆಯದ ಕಾರಣ ಮರು ಉತ್ತರ ನೀಡಿಲ್ಲ ಎನ್ನುತ್ತಾರೆ.

**3.** ಯಾವ ಆಧಾರದ ಮೇಲೆ ನೀವು ಪ್ರತಿವಾದಿಗೆ ಗೋಡಾನನ್ನು ಬಾಡಿಗೆಯಾಗಿ ನೀಡಿದ್ದೀರಿ ಎಂದು ಹೇಳುತ್ತೀರಿ ಎಂದರೆ ಸಾಕ್ಷಿ ನನ್ನ ಮತ್ತು ಪ್ರತಿವಾದಿಯ ಮಧ್ಯೆ ಪರಸ್ಪರ ಒಪ್ಪಿಗೆಯಿಂದ ನಾನು ಪ್ರತಿವಾದಿಗೆ ಗೋಡಾನನ್ನು ನೀಡಿದ್ದೆ ಎನ್ನುತ್ತಾರೆ. ನೀವು ಹೇಳಿದಂತೆ ನಿಮ್ಮ ಮತ್ತು ಪ್ರತಿವಾದಿಯ ಮಧ್ಯೆ ಪರಸ್ಪರ ಒಪ್ಪಿಗೆಯಿಂದ ನೀವು ಪ್ರತಿವಾದಿಗೆ

ಗೋಡಾನನ್ನು ಯಾವುದೇ ಬಾಡಿಗೆ ಇಲ್ಲದೆ ನೀಡಬೇಕಿತ್ತು ಮತ್ತು ಪ್ರತಿವಾದಿಗೆ ನಿಮಗೆ 4,00,000/- ರೂಗಳನ್ನು ಕೊಡಬೇಕಿತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಯಾವುದೇ ಹಣವನ್ನು ಪ್ರತಿವಾದಿಯಿಂದ ಪಡೆದಿಲ್ಲ ಎನ್ನುತ್ತಾರೆ. ನೀವು ಪ್ರತಿವಾದಿಗೆ ಗೋಡಾನನ್ನು ಭೋಗ್ಯಕ್ಕಾಗಿ ನೀಡಿದ ಬಗ್ಗೆ ಯಾವುದೇ ದಾಖಲೆಗಳು ಇಲ್ಲ , ಆದ್ದರಿಂದ ಪ್ರತಿವಾದಿಗೆ ಗೋಡಾನನ್ನು ಭೋಗ್ಯಕ್ಕಾಗಿ ನೀಡುತ್ತೇನೆ ಎಂದು ತೋರಿಸಲು ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ಶಾಪನ್ನು ಬಾಡಿಗೆಯಾಗಿ ನೀಡಿದ ದಿನದಿಂದ ಪ್ರತಿವಾದಿ ಶಾಪ್ ನ ಬಾಡಿಗೆ ಹಣವನ್ನು ನೀಡುತ್ತಿದ್ದಾರೆ ಎಂದರೆ ಸರಿ. ವಾದ ಪತ್ರದ ಪ್ರಕಾರ ನೀವು ಗೋಡಾನ್ ಗೆ ಆರಂಭದಿಂದಲೇ ಹಣ ಕೊಡಬೇಕೆಂದು ಕೇಳಿದ್ದೀರಿ ಎಂದರೆ ಸಾಕ್ಷಿ ಗೋಡಾನ್ ನ ಅವಧಿ ಮುಗಿದ ನಂತರ ಕೊಡಬೇಕಾದ ಹಣವನ್ನು ಕೇಳಿದ್ದೇನೆ ಎನ್ನುತ್ತಾರೆ. ಯಾವಾಗ ಪ್ರತಿವಾದಿಗೆ ಗೋಡಾನನ್ನು ಬಾಡಿಗೆಗೆ ನೀಡಲಾಯಿತು ಎಂದರೆ ಸಾಕ್ಷಿ ದಿನಾಂಕ 01.12.2012 ರ ಒಂದು ವರ್ಷ ಮೊದಲು ನೀಡಲಾಗಿತ್ತು ಎನ್ನುತ್ತಾರೆ. ನೀವು ಪ್ರತಿವಾದಿಗೆ ದಿನಾಂಕ 01.12.2012 ರ ಮೊದಲು ಗೋಡಾನನ್ನು ಬಾಡಿಗೆಯಾಗಿ ನೀಡಿದ ಬಗ್ಗೆ ಯಾವುದೇ ದಾಖಲೆಗಳು ಇಲ್ಲ ಎಂದರೆ ಸಾಕ್ಷಿ ನಾವು ಪರಸ್ಪರ ಒಪ್ಪಿಗೆಯಿಂದ ನೀಡಿದ್ದೆವು, ಪ್ರತಿವಾದಿ ಗೋಡಾನಿನ ಕಬ್ಜೆಯನ್ನು ಪಡೆದಿದ್ದರು ಎನ್ನುತ್ತಾರೆ. ಪ್ರತಿವಾದಿ 2012 ರ ಮೊದಲು ನಿಮಗೆ ಬಾಡಿಗೆ ಹಣ ನೀಡಿದ ಬಗ್ಗೆ ದಾಖಲೆಗಳು ಇವೆಯೇ ಎಂದರೆ ಸಾಕ್ಷಿ ಚೆಕ್ ಮುಖಾಂತರ ಬಾಡಿಗೆ ಹಣ ನೀಡುತ್ತಿದ್ದರು ಎನ್ನುತ್ತಾರೆ. ಪ್ರತಿವಾದಿಯು 2012 ರ ಒಂದು ವರ್ಷ ಮೊದಲು ಗೋಡಾನಿನ ಕಬ್ಜೆಯನ್ನು ಪಡೆದಿದ್ದರು ಎಂದು ವಾದ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸಾಕ್ಷಿ ಪ್ರತಿವಾದಿ ಬಾಕಿ ಹಣ

ಕೊಡದ ಕಾರಣ ಪ್ರತಿವಾದಿಯಿಂದ ಬರಬೇಕಾದ ಹಣದ ಬಗ್ಗೆ ಮಾತ್ರ ವಾದ ಪತ್ರದಲ್ಲಿ ನಮೂದಿಸಿದ್ದೇನೆ ಎನ್ನುತ್ತಾರೆ. ಪ್ರತಿವಾದಿಗೆ ಗೋಡಾನನ್ನು ತಿಂಗಳ ಬಾಡಿಗೆ ಆಧಾರದ ಮೇಲೆ ನೀಡಲಾಗಿತ್ತು ಎಂದು ತೋರಿಸಲು ದಾಖಲೆಗಳು ಇವೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

**4.** ನೀವು ಹಾಜರುಪಡಿಸಿದ ನಿಪಿ-8 ರಿಂದ 14 ರಲ್ಲಿ ಯಾವ ಹಣವನ್ನು ಶಾಪ್ ಗಾಗಿ ಪಡೆದಿದ್ದೀರಿ ಮತ್ತು ಯಾವ ಹಣವನ್ನು ಗೋಡಾನ್ ಗಾಗಿ ಪಡೆದಿರುತ್ತೀರಿ ಎಂದು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಗೋಡಾನ್‌ಗೆ ಹೆಚ್ಚುವರಿ ಹಣ ನಿಗದಿಪಡಿಸಲಾಗಿತ್ತು ಎಂದರೆ ಸಾಕ್ಷಿ ನಿಗದಿಪಡಿಸಲಾಗಿತ್ತು , ಅದನ್ನು ವಾದ ಪತ್ರದಲ್ಲಿ ತೋರಿಸಿದ್ದೇನೆ ಎನ್ನುತ್ತಾರೆ. ಯಾವ ವರ್ಷದಿಂದ ಹೆಚ್ಚುವರಿ ಹಣ ಗೋಡಾನ್ ಗಾಗಿ ಕೊಡಬೇಕಾಗಿತ್ತು ಎಂದರೆ ಸಾಕ್ಷಿ 2012 ರಿಂದ ಎನ್ನುತ್ತಾರೆ. ಎಷ್ಟು ಹಣ ಗೋಡಾನ್ ಗಾಗಿ ಹೆಚ್ಚು ಮಾಡಲಾಗಿತ್ತು ಎಂದರೆ ಸಾಕ್ಷಿ 750/- ರೂಗಳು ಎನ್ನುತ್ತಾರೆ. ವಾದ ಪತ್ರದಲ್ಲಿ ಗೋಡಾನ್ ನ ಬಾಕಿ ಹಣ 3,00,000/- ರೂಗಳು ಎಂದು ತೋರಿಸಲಾಗಿದೆ, ಪ್ರತಿ ತಿಂಗಳ ಬಾಡಿಗೆ ಹಣ ಎಷ್ಟು ಇತ್ತು ಎಂದು ತೋರಿಸಿಲ್ಲ ಎಂದರೆ ಸಾಕ್ಷಿ ನಾವು ಪ್ರತಿವಾದಿಯಿಂದ ಬರಬೇಕಾದ 5 ವರ್ಷಗಳ ಒಟ್ಟು ಬಾಕಿ ಹಣವನ್ನು ತೋರಿಸಿದ್ದೇವೆ ಎನ್ನುತ್ತಾರೆ. ವಾದ ಪತ್ರದ 4 ನೇ ಪುಟದಲ್ಲಿ ತೋರಿಸಿದ 20,000/- ರೂಗಳು ಯಾವುದರ ಹಣ ಎಂದರೆ ಸಾಕ್ಷಿ 4 ತಿಂಗಳ ಬಾಡಿಗೆ ಹಣ ಎನ್ನುತ್ತಾರೆ. ಗೋಡಾನಿಗಾಗಿ ಬರಬೇಕಾದ ಹೆಚ್ಚುವರಿ ಬಾಡಿಗೆ ಹಣವನ್ನು ವಾದ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿ. ಗೋಡಾನನ್ನು ಬಾಡಿಗೆಯಾಗಿ ನೀಡಿರಲಿಲ್ಲ, ಆದ್ದರಿಂದ ಹೆಚ್ಚುವರಿ ಬಾಡಿಗೆ ಹಣವನ್ನು ವಾದ ಪತ್ರದಲ್ಲಿ

ತೋರಿಸಿಲ್ಲ ಎಂದರೆ ಸಾಕ್ಷಿ ನಾವು ಗೋಡಾನ್ ಸಲುವಾಗಿ ಯಾವುದೇ ಲಿಖಿತ ದಾಖಲೆ ಮಾಡಿಕೊಂಡಿರಲಿಲ್ಲ, ಆದ್ದರಿಂದ ಕೇವಲ ಗೋಡಾನಿನ ಬಾಕಿ ಹಣವನ್ನು ಮಾತ್ರ ತೋರಿಸಿದ್ದೇವೆ ಎನ್ನುತ್ತಾರೆ. ಪ್ರತಿವಾದಿ ನಿಮಗೆ ಶಾಪ್ ನ ಹಣವನ್ನು ಕೊಡುತ್ತಿದ್ದರು , ಗೋಡಾನಿನ ಹಣವನ್ನು ಪಡೆಯದೆ ಯಾಕೆ ನೀವು ಪ್ರಯತ್ನಿಸಲಿಲ್ಲ ಎಂದರೆ ಸಾಕ್ಷಿ ನಾವು ಪ್ರತಿವಾದಿಯನ್ನು ಕೇಳುತ್ತಿದ್ದೆವು, ಆದರೆ ಪ್ರತಿವಾದಿ ಅವರ ವ್ಯವಹಾರವನ್ನು ನಿರಂತರವಾಗಿ ನಡೆಸದ ಕಾರಣ ಬಾಡಿಗೆ ಹಣವನ್ನು ಕೊಡಲು ಮುಂದೆ ಹಾಕುತ್ತಿದ್ದರು ಎನ್ನುತ್ತಾರೆ. ಗೋಡಾನಿನ ಬಾಡಿಗೆ ಹಣವನ್ನು ಕೊಡುವಂತೆ ಕೇಳಿ ನೀವು ಪ್ರತಿವಾದಿಗೆ ಯಾವುದೇ ನೋಟಿಸ್ ನೀಡಿಲ್ಲ ಎಂದರೆ ಸರಿ. ನಿಮ್ಮ ಮತ್ತು ಪ್ರತಿವಾದಿಯ ಮಧ್ಯೆ ಪ್ರತಿವಾದಿಯಿಂದ ನೀವು 4,00,000/- ರೂಗಳನ್ನು ಪಡೆದು ಪ್ರತಿವಾದಿ ಗೋಡಾನನ್ನು ಬಾಡಿಗೆಯಾಗಿ ಉಪಯೋಗಿಸಬೇಕಾಗಿತ್ತು ಎಂದರೆ ಸರಿಯಲ್ಲ. ನೀವು ಗೋಡಾನಿನ ಹಣವನ್ನು ಪಡೆಯಲು ಹಕ್ಕುಳ್ಳವರಾಗಿರಲಿಲ್ಲ, ಆದ್ದರಿಂದ ಯಾವುದೇ ನೋಟಿಸನ್ನು ಪ್ರತಿವಾದಿಗೆ ನೀಡಿಲ್ಲ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ತೋರಿಸಿದಂತೆ ಪ್ರತಿವಾದಿ ಗೋಡಾನಿನ ಹಣವನ್ನು ಕೊಡಲು ಭಾದ್ಯಸ್ಥರಲ್ಲ ಎಂದರೆ ಸರಿಯಲ್ಲ. ನೀವು ಪ್ರತಿವಾದಿಯ 4,00,000/- ರೂಗಳನ್ನು ನಿಮ್ಮ ಬಳಿ ಇಟ್ಟುಕೊಂಡಿದ್ದರಿಂದ ಪ್ರತಿವಾದಿಯಿಂದ ಗೋಡಾನಿನ ಕಬ್ಜೆಯನ್ನು ಪಡೆಯಲು ನಿಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ . ನಾನು ಪ್ರತಿವಾದಿಯ ಹಣವನ್ನು ಇಟ್ಟುಕೊಂಡಿದ್ದರಿಂದ ಪ್ರತಿವಾದಿ ನನಗೆ ಗೋಡಾನಿನ ಕಬ್ಜೆಯನ್ನು ಕೊಟ್ಟಿಲ್ಲ ಮತ್ತು ನನಗೆ ಮರು ಉತ್ತರ ನೋಟಿಸನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ.

**5.** ಗೋಡಾನಿನ ಬಾಕಿ ಹಣವನ್ನು ಕೇಳಿ 3 ವರ್ಷಗಳ ಅವಧಿಯಲ್ಲಿ ದಾವೆ ಹೂಡಿಲ್ಲ ಎಂದರೆ ಸಾಕ್ಷಿ ನಾವು ಪ್ರತಿವಾದಿಯನ್ನು ನಿರಂತರವಾಗಿ ಕೇಳುತ್ತಿದ್ದೆವು , ಆದ್ದರಿಂದ ದಾವೆ ಹೂಡಿರಲಿಲ್ಲ ಎನ್ನುತ್ತಾರೆ. ಗೋಡಾನಿನ ಬಾಕಿ ಹಣ ಬರಬೇಕಾಗಿದೆ ಎಂದು ಪ್ರತಿವಾದಿಯ ವಿರುದ್ಧ ನಾನು ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ . ನೀವು ಪ್ರತಿವಾದಿಯಿಂದ ಶಾಪ್ ನ 54,760/- ರೂಗಳು ಮತ್ತು ಗೋಡಾನಿನ 3,74,760/- ರೂಗಳನ್ನು ಪಡೆಯಲು ಹಕ್ಕುಳ್ಳವರಾಗಿಲ್ಲ ಎಂದರೆ ಸರಿಯಲ್ಲ . ನಾನು ಪ್ರತಿವಾದಿಯಿಂದ 4,00,000/- ರೂಗಳನ್ನು ಪಡೆಯಬೇಕು ಮತ್ತು ಪ್ರತಿವಾದಿ ಗೋಡಾನನ್ನು ಉಪಯೋಗಿಸಬೇಕು ಎಂದು ಗೊತ್ತಿದ್ದರೂ ಸಹ ಪ್ರತಿವಾದಿಯ ವಿರುದ್ಧ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನೀವು ಪ್ರತಿವಾದಿಗೆ ಶಾಪ್ ನ 1,00,000/- ರೂಗಳು ಮತ್ತು ಗೋಡಾನಿನ 4,00,000/- ರೂಗಳನ್ನು ಮರಳಿಸಬೇಕು, ಆದ್ದರಿಂದ ನೀವು 2 ಸ್ವತ್ತುಗಳು ಕಬ್ಜೆಯನ್ನು ಪಡೆಯಲು ಹಕ್ಕುಳ್ಳವರಾಗಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**ಸಹಿ/-**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**